ಪಾರದರ್ಶಕ ಕಾಯ್ದೆಯನುಸಾರ ಟೆಂಡರ್ ಪ್ರಕ್ರಿಯೆಯನ್ನು ಅಂತಿಮಗೊಳಿಸಲಾಗಿದ್ದು ಸಮೀಕ್ಷೆಯಲ್ಲಿ ಗುರುತಿಸಲಾಗಿರುವ ಅರ್ಹ ಫಲಾನುಭವಿಗಳಿಗೆ 6 ತಿಂಗಳ ಅವಧಿಗೆ ತಾತ್ಕಾಲಿಕ ಕೂಪನ್‌ಗಳು ನೀಡುವ ಪ್ರಕ್ರಿಯೆ ಆರಂಭವಾಗಿದ್ದು, ಸರ್ಕಾರಿ ಆದೇಶ ಸಂ: ಎಫ್‌ಸಿಎಸ್ 40 ಇಭತ 05, ದಿ: 17–3–06 ರನ್ವಯ ದಿ: 1–10–2006 ರೊಳಗಾಗಿ ಗಣಕೀಕೃತ ಪಡಿತರ ಚೀಟಿ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ. ಇಂತಹ ಕುಟುಂಬಗಳು ಜಿಲ್ಲಾ ಮಟ್ಟದಲ್ಲಿ ರಚಿಸಲಾಗಿರುವ ಆಹಾರ ಭದ್ರತಾ ಸಮಿತಿಗೆ ಅರ್ಜಿ ಸಲ್ಲಿಸುವ ಅವಕಾಶ ಕಲ್ಪಿಸಲಾಗಿದೆ.

382(34) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) : ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಮೀಣ ನೀರು ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಂಡರಗಿ ತಾಲ್ಲೂಕು ಬಿದರಹಳ್ಳಿ ಗ್ರಾಮಕ್ಕೆ ಕುಡಿಯುವ ನೀರು ಪೂರೈಸುವ ಕೆಲಸ ಪ್ರಾರಂಭವಾಗಿ ಎಷ್ಟು ವರ್ಷಗಳಾಯಿತು; ಎಷ್ಟು ವರ್ಷಕ್ಕೆ ಕೆಲಸ ಪೂರ್ಣಗೊಳ್ಳಬೇಕಾಗಿತ್ತು; ಕೆಲಸ ಪೂರ್ಣಗೊಳಿಸಿ ಯಾವಾಗ ಕುಡಿಯುವ ನೀರು ಒದಗಿಸಲಾಗುವುದು;

ಆ) ಬಿದರಹಳ್ಳಿ ಹಾಗೂ ಇತರೆ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಗಾಗಿ ಮಂಜೂರಾದ ಅಂದಾಜು ಮೊತ್ತವೆಷ್ಟು; ಸದರಿ ಕಾಮಗಾರಿ ಪೂರ್ಣಗೊಳ್ಳಬೇಕಾದರೆ ಬೇಕಾಗುವ ಹಣವೆಷ್ಟು;

ಇ) ಕಾಮಗಾರಿ ವಿಳಂಬವಾಗಲು ಕಾರಣವಾದವರ ಮೇಲೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಮೀಣ ನೀರು ಸರಬರಾಜು ಸಚಿವರು)

ಅ) ಮುಂಡರಗಿ ತಾಲ್ಲೂಕು ಬಿದರಹಳ್ಳಿ ಹಾಗೂ ಇತರೆ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆಯ ಕೆಲಸ ಮಾರ್ಚ್ 2001ರಲ್ಲಿ ಪ್ರಾರಂಭವಾಗಿದೆ. ಕೆಲಸ ಪ್ರಾರಂಭಿಸಿದ 20 ತಿಂಗಳುಗಳೊಳಗಾಗಿ ಕಾಮಗಾರಿ ಪೂರ್ಣಗೊಳ್ಳಬೇಕಾಗಿತ್ತು. ಈ ಕಾಮಗಾರಿಯನ್ನು ಡಿಸೆಂಬರ್ 2006ರೊಳಗಾಗಿ ಪೂರ್ಣಗೊಳಿಸಿ ಕುಡಿಯುವ ನೀರನ್ನು ಒದಗಿಸಲು ಕ್ರಮಕೈಗೊಳ್ಳಲಾಗುವುದು.

ಆ) ಮಂಜೂರಾದ ಈ ಯೋಜನೆಯ ಅಂದಾಜುಮೊತ್ತ ರೂ. 351 ಲಕ್ಷ. ಟೆಂಡರ್ ಆಧಾರದ ಮೇಲೆ ರೂ. 631.43 ಲಕ್ಷದಲ್ಲಿ ಗುತ್ತಿಗೆ ನೀಡಲಾಗಿದೆ. ಇಲ್ಲಿಯವರೆಗೆ ರೂ. 573.90 ಲಕ್ಷ ವೆಚ್ಚವಾಗಿದೆ. ಬಾಕಿ ಕಾಮಗಾರಿ ಪೂರ್ಣಗೊಳಿಸಲು ಇನ್ನೂ ರೂ. 57.53 ಲಕ್ಷದ ಅವಶ್ಯಕತೆಯಿದೆ.

ಇ) ಕಾಮಗಾರಿ ಅಪೂರ್ಣಗೊಂಡಿರುವ ಬಗ್ಗೆ ಗಮನಿಸಲಾಗಿದ್ದು, ಟೆಂಡರ್ ನಿಯಮಾವಳಿಯಂತೆ ಗುತ್ತಿಗೆದಾರರಿಗೆ ಅಂತಿಮ ನೋಟೀಸನ್ನು ದಿನಾಂಕ: 23–2–06ರಂದು ನೀಡಲಾಗಿದೆ. ಗುತ್ತಿಗೆದಾರರು ಕೆಲಸ ಪ್ರಾರಂಭಿಸದಿದ್ದಲ್ಲಿ ಗುತ್ತಿಗೆದಾರರ ಜವಾಬ್ದಾರಿ ಮೇಲೆ ಟೆಂಡರ್‌ಅನ್ನು ರದ್ದುಪಡಿಸಿ, ಬೇರೆ ಏಜೆನ್ಸಿ ಮುಖೇನ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುವುದು.

383(390) ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ (ಹುಕ್ಕೇರಿ) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷಿ ಮಾರುಕಟ್ಟೆ ನಿಯಮಗಳನ್ನು ಅಳವಡಿಸಿಕೊಳ್ಳದೇ ಅದರ ಕಾಲಮಿತಿಯನ್ನು ಉಲ್ಲಂಘಿಸಿ, ಬಡ್ತಿಗಳನ್ನು ನೀಡುತ್ತಿರುವುದರ ಔಚಿತ್ಯಗಳೇನು; (ವಿವರಿಸುವುದು)

ಆ) ಇದರ ಅಳವಡಿಕೆಗೆ ಎಷ್ಟು ಸಭೆಗಳನ್ನು ಕರೆಯಲಾಗಿದೆ, ಸಭೆಯ ತೀರ್ಮಾನಗಳೇನು, ಈ ಬಗ್ಗೆ ಉಭಯ ಸದನಗಳಲ್ಲಿಯೂ ಪ್ರಸ್ತಾಪಿಸಲ್ಪಟ್ಟು, ನೀಡಿದ ಭರವಸೆಗಳಿಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಇದರಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಳವಡಿಸಿಕೊಳ್ಳದೇ ಅಕ್ರಮ ಅವ್ಯವಹಾರಗಳಿಗೆ ಅವಕಾಶ ಮಾಡಿಕೊಟ್ಟಂತಾಗುವುದಿಲ್ಲವೇ;

ಈ) ಈ ನಿಯಮಗಳನ್ನು ಅಳವಡಿಸಿಕೊಳ್ಳುವುದರಿಂದ ಯಾವ ಯಾವ ಪದವೃಂದದ ನೌಕರರಿಗೆ ಬಡ್ತಿ ಲಭ್ಯವಾಗುತ್ತದೆ.

ಉ) ನಿಯಮ ಉಲ್ಲಂಘನೆಯಾಗಿರುವುದರಿಂದ ಬಡ್ತಿಗೆ ವಂಚಿತರಾಗಿರುವ ನೌಕರರ ಸಂಖ್ಯೆ ಎಷ್ಟು?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)

ಅ) ಹೆಚ್ಚಿನ ಕಾಲವಿಳಂಬವಾಗದಂತೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಂತಿಮವಾಗಿ ಅಳವಡಿಸಿಕೊಳ್ಳಲು ಸೂಚಿಸಲಾಗಿದೆ.

ಕೃಷಿ ಮಾರಾಟ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಹೊರಡಿಸುವುದು ಅಂತಿಮ ಹಂತದಲ್ಲಿದೆ. ಪ್ರಸ್ತುತ ಜಾರಿಯಲ್ಲಿರುವ ಕಾರ್ಯಕಾರಿ ಆದೇಶ ರನ್ವಯ ವಿವಿಧ ಪದವೃಂದದ ಹುದ್ದೆಗಳಿಗೆ ಪನೋನ್ನತಿ ನೀಡಲಾಗುತ್ತಿದೆ.

ಆ) ಈ ಬಗ್ಗೆ ಹಲವಾರು ಬಾರಿ (10–13) ಸಭೆಯನ್ನು ಕರೆಯಲಾಗಿದ್ದು, ಕರಡು ವೃಂದ ಮತ್ತು ನೇಮಕಾತಿ ನಿಯಮಗಳನ್ನು ವಿವಿಧ ಇಲಾಖೆಗಳೊಡನೆ ಸಮಾಲೋಚಿಸಿ ಅಂತಿಮ ಗೊಳಿಸಲಾಗಿದೆ.

ಇ) ಪ್ರಸ್ತುತ ಜಾರಿಯಲ್ಲಿರುವ ಕಾರ್ಯಕಾರಿ ಆದೇಶದಂತೆ ನಿಯಮಗಳನ್ನು ಪಾಲಿಸಲಾಗುತ್ತಿದ್ದು ಅಕ್ರಮಗಳಿಗೆ ಅವಕಾಶವಿರುವುದಿಲ್ಲ.